**ದಿನಾಂಕ 07-01-2019ರ ಬೆಳಗ್ಗೆ ಮಾನ್ಯ ಪಾಲಿಕೆ ಸದಸ್ಯರು ಹಾಗೂ ವಾರ್ಡ್ ಸಮಿತಿಯ ಅಧ್ಯಕ್ಷರಾದಂತಹ ಶ್ರೀ. ಎನ್.ಮಂಜುನಾಥ ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿಯ ಸಭೆಯ ನಡಾವಳಿಗಳು**

**ಹಾಜರಿದ್ದವರು:**

| | | |
|---|---|---|
| 1. | ಶ್ರೀ. ಎನ್. ಮಂಜುನಾಥ್ ಮಾನ್ಯ ಪಾಲಿಕೆ ಸದಸ್ಯರು ವಾರ್ಡ್ ನಂ.87 | ಅಧ್ಯಕ್ಷರು |
| 2. | ಶ್ರೀ. ಶ್ರೀನಿವಾಸ ಮೂರ್ತಿ | ಸದಸ್ಯರು |
| 3. | ಶ್ರೀಮತಿ. ಶಾಲಿನಿ | ಸದಸ್ಯರು |
| 4. | ಶ್ರೀಮತಿ. ರೀನಾ | ಸದಸ್ಯರು |
| 5. | ಶ್ರೀಮತಿ. ಡೈಸಿ ಷನ್ಮುಗಂ | ಸದಸ್ಯರು |
| 6. | ಶ್ರೀ. ಮುರುಗನ್ | ಸದಸ್ಯರು |
| 7. | ಶ್ರೀ. ಇಷ್ತಿಯಾರ್ | ಸದಸ್ಯರು |
| 8. | ಫಿಲಿಕ್ಸ್ ಲಾರೆನ್ಸ್ | ಸದಸ್ಯರು |
| 9 | ಡಿ. ಕೃಷ್ಣಪ್ಪ | ಸದಸ್ಯರು |
| 10 | ಸೂರ್ಯಪ್ರಕಾಶ್ | ಸದಸ್ಯರು |
| 11 | ಲಕ್ಷ್ಮಣ್ ರಾಜ್ | ಸದಸ್ಯರು |
| 12 | ಶ್ರೀ. ಎಸ್.ಪಿ ರವಿರಾಜ್ ಸಹಾಯಕ ಅಭಿಯಂತರರು | ಕಾರ್ಯದರ್ಶಿ |
| 13. | ಶ್ರೀ. ಕೃಷ್ಣ ಪೂಜಾರಿ ಹಿರಿಯ ಆರೋಗ್ಯ ಪರಿವೀಕ್ಷಕರು | |
| 14 | ಶ್ರೀ. ನರಸಿಂಹಲು ಕಿರಿಯ ಆರೋಗ್ಯ ನಿರೀಕ್ಷಕರು | |

ಮಾನ್ಯ ಪಾಲಿಕೆ ಸದಸ್ಯರು ಹಾಗೂ ವಾರ್ಡ್ ಸಮಿತಿಯ ಅಧ್ಯಕ್ಷರು ರವರು ವಾರ್ಡ್ ಸಮಿತಿಯ ಎಲ್ಲಾ ಕಾರ್ಯದರ್ಶಿಯವರು ಮತ್ತು ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

1. ಸದಸ್ಯರಾದ ಶ್ರೀಮತಿ. ಡೈಸಿ ಷಣ್ಮುಗಂ, ಇಷ್ತಿಯಾರ್ ಮತ್ತು ಫಿಲಿಕ್ಸ್ ಲಾರೆನ್ಸ್ ರವರು ವಾರ್ಡ್ ಕಛೇರಿಯನ್ನು ವಾರ್ಡ್ ನಂ.87ರ ವ್ಯಾಪ್ತಿಯಲ್ಲಿ ಆರಂಭಿಸುವ ಬಗ್ಗೆ ಪ್ರಸ್ತಾಪಿಸಿದರು. ಕಟ್ಟಡ ನಿರ್ಮಾಣಕ್ಕೆ ಅವಶ್ಯವಿರುವ ಸ್ಥಳದ ಬಗ್ಗೆ ಕಂದಾಯ ವಿಭಾಗದಿಂದ ವರದಿ ಪಡೆದು ಅಗತ್ಯ ಕ್ರಮ ವಹಿಸಲಾಗುವುದು ಎಂದು ಸಹಾಯಕ ಅಭಿಯಂತರರು ಸಭೆಗೆ ತಿಳಿಸಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು

Scanned by CamScanner

2. ಸದಸ್ಯರಾದ ಶ್ರೀಮತಿ. ಡೈಸಿ ಷಣ್ಮುಗಂ, ಇಪ್ತಿಯಾರ್ ಮತ್ತು ಫಿಲಿಕ್ಸ್ ಲಾರೆನ್ಸ್ ರವರು ಕೈರಳೀ ಶಾಲೆ ಸಮೀಪದಲ್ಲಿ ಕಸದ ಸಮಸ್ಯೆಗಳ ಬಗ್ಗೆ ಪ್ರಸ್ತಾಪಿಸಿದರು. ಕಸದ ಸಮಸ್ಯೆಯನ್ನು ಸಭೆಯಲ್ಲಿ ಹಾಜರಿದ್ದ ಹಿರಿಯ ಹಾಗೂ ಕಿರಿಯ ಆರೋಗ್ಯ ನಿರೀಕ್ಷಕರವರಿಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು

ಕ್ರಮ: ಹಿರಿಯ /ಕಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ
ಸಹಾಯಕ ಅಭಿಯಂತರರು ವಾರ್ಡ್ ನಂ. 87

3. ಸದಸ್ಯರಾದ ಶ್ರೀ. ಇಪ್ತಿಯಾರ್ ರವರು ಕೃಷ್ಣಾ ಅಪಾರ್ಟ್‌ಮೆಂಟ್ ರಸ್ತೆ ಮೋರಿಗಳ ದುರಸ್ಥಿ ಬಗ್ಗೆ ಪ್ರಸ್ತಾಪಿಸಿದರು. ಈ ಕುರಿತಂತೆ ಸಹಾಯಕ ಅಭಿಯಂತರರು ಪ್ರಸಕ್ತ ಸಾಲಿನ ಕ್ರಿಯಾಯೋಜನೆಯಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಕಾಮಗಾರಿಗೆ ಕಾರ್ಯಾದೇಶ ನೀಡಿದ ನಂತರ ಕಾಮಗಾರಿ ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.

ಕ್ರಮ: ಸಹಾಯಕ ಅಭಿಯಂತರರು ವಾರ್ಡ್ ನಂ. 87

4. ಸದಸ್ಯರಾದ ಶ್ರೀಮತಿ. ಡೈಸಿ ಷಣ್ಮುಗಂ ರವರು ಕೃಷ್ಣ ಅಪಾರ್ಟ್‌ಮೆಂಟ್ ರಸ್ತೆ, ಖಾಲಿ ಜಾಗದಲ್ಲಿನ ಕಸದ ರಾಶಿಯನ್ನು ತೆಗೆಸುವ ಬಗ್ಗೆ ಚರ್ಚಿಸಿದರು ಈ ಕುರಿತಂತೆ ಹಿರಿಯ ಆರೋಗ್ಯ ನಿರೀಕ್ಷಕರು ಸ್ಥಳ ಪರಿಶೀಲನೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

ಕ್ರಮ: ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು

5. ಸದಸ್ಯರಾದ ಶ್ರೀ. ಮುರುಗನ್ ರವರು ಕಸದ ಸಂಗ್ರಹಣೆ ವಾಹನ ನಿಯಮಿತವಾಗಿ ಬರುತ್ತಿಲ್ಲವೆಂಬುದರ ಬಗ್ಗೆ ಚರ್ಚಿಸಿದರು ಈ ಕುರಿತಂತೆ ಹಿರಿಯ ಆರೋಗ್ಯ ನಿರೀಕ್ಷಕರು ಸ್ಥಳ ಪರಿಶೀಲನೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

ಕ್ರಮ: ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು

6. ಸದಸ್ಯರಾದ ಶ್ರೀ. ಇಪ್ತಿಯಾರ್ ರವರು ಮಸೀದಿ ರಸ್ತೆಯಲ್ಲಿನ ಕಸದ ಸಮಸ್ಯೆ ಬಗ್ಗೆ ಈ ಕುರಿತಂತೆ ಹಿರಿಯ ಆರೋಗ್ಯ ನಿರೀಕ್ಷಕರು ಸ್ಥಳ ಪರಿಶೀಲನೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

ಕ್ರಮ: ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು

7. ಸದಸ್ಯರಾದ ಇಪ್ತಿಯಾರ್ ರವರು ತೆರಿಗೆ ಸಂಗ್ರಹಣೆಯನ್ನು ಸಮರ್ಪಕವಾಗಿ ನಿರ್ವಹಿಸುವ ಬಗ್ಗೆ ಪ್ರಸ್ತಾಪಿಸಿದರು. ಈ ಕುರಿತಂತೆ ಸಹಾಯಕ ಕಂದಾಯ ಅಧಿಕಾರಿ ರವರು ತಮ್ಮ ಸಿಬ್ಬಂದಿಗಳೊಡನೆ ಸಭೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

ಸಹಾಯಕ ಕಂದಾಯ ಅಧಿಕಾರಿ
ವಾರ್ಡ್ ನಂ. 87

Scanned by CamScanner

8. ಸದಸ್ಯರಾದ ಶ್ರೀ. ಮುರುಗನ್ ಹಾಗೂ ಇಪ್ತಿಯಾರ್ ರವರು ಮತದಾರರ ಗುರುತಿನ ಚೀಟಿಗಳನ್ನು ತ್ವರಿತವಾಗಿ ನೀಡುವ ಬಗ್ಗೆ ಪ್ರಸ್ತಾಪಿಸಿದರು. ಈ ಕುರಿತಂತೆ ಕಂದಾಯ ಪರಿವೀಕ್ಷಕರು/ಕಂದಾಯ ವಸೂಲಿಗಾರರಿಗೆ ಅತೀ ತುರ್ತಾಗಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

ಸಹಾಯಕ ಕಂದಾಯ ಅಧಿಕಾರಿ
ವಾರ್ಡ್ ನಂ. 87

9. ಸದಸ್ಯರಾದ ಶ್ರೀ. ಮುರುಗನ್ ರವರು ಹೆಚ್ಚುವರಿ ಯು.ಜಿ.ಡಿ ವಾಹನ ಒದಗಿಸುವ ಬಗ್ಗೆ ಪ್ರಸ್ತಾಪಿಸಿದರು. ಈ ಬಗ್ಗೆ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಕ್ರಮ ಕೈಗೊಳ್ಳುವುವಂತೆ ತಿಳಿಸುವುದಾಗಿ ವಾರ್ಡಿನ ಸಹಾಯಕ ಅಭಿಯಂತರರು ಸಭೆಗೆ ತಿಳಿಸಿದರು.

ಕ್ರಮ: ಸಹಾಯಕ ಅಭಿಯಂತರರು
ಬಿ.ಡಬ್ಲ್ಯೂ.ಎಸ್.ಎಸ್.ಬಿ

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕರಡು ಟಿಪ್ಪಣಿ ಮಾನ್ಯ ಅಧ್ಯಕ್ಷರಿಂದ ಅನುಮೋದಿಸಲ್ಪಟ್ಟಿದೆ.

ವಾರ್ಡ್ ಅಭಿಯಂತರರು ಹಾಗೂ ಕಾರ್ಯದರ್ಶಿಗಳು
ವಾರ್ಡ್‌ನಂ. 87.

ಪ್ರತಿಗಳು:

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ,ಮಹದೇವಪುರ ವಲಯ ರವರ ಘನ ಅವಗಾಹನೆಗಾಗಿ
2. ಮಾನ್ಯ ಮುಖ್ಯ ಅಭಿಯಂತರರು, ಮಹದೇವಪುರ ವಲಯ ರವರ ಘನ ಅವಗಾಹನೆಗಾಗಿ
3. ಕೌನ್ಸಿಲ್ ಕಾರ್ಯದರ್ಶಿಯವರು, ಬಿ.ಬಿ.ಎಂ.ಪಿ. ಕೇಂದ್ರ ಕಛೇರಿ ರವರ ಘನ ಅವಗಾಹನೆಗಾಗಿ
4. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ. ಕೆ.ಆರ್.ಪುರ ವಿಭಾಗ ರವರ ಅವಗಾಹನೆಗಾಗಿ
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಚ್.ಎ.ಎಲ್ ಏರ್‌ಪೋರ್ಟ್ ಉಪ ವಿಭಾಗ ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ಕಛೇರಿ ಪ್ರತಿ.

Scanned by CamScanner